CW.12 PW.7

**ಅಧಿಕ ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ., ಕನಕಪುರ ರವರ ನ್ಯಾಯಾಲಯದಲ್ಲಿ**

# CC No.131/2007

| | |
|---|---|
| ಸಾಕ್ಷಿದಾರರ ಹೆಸರು | ಶ್ರೀಮತಿ ಸಣ್ಣಬೋರಮ್ಮ |
| ಗಂಡನ ಹೆಸರು | ಸುಬ್ರಮಣಿ |
| ವಯಸ್ಸು | 67 ವರ್ಷ |
| ವೃತ್ತಿ | ನಿವೃತ್ತ ಜಂಟಿ ನಿರ್ದೇಶಕರು, ಗಣಿ ಮತ್ತು ಭೂ ವಿಜ್ಞಾನ ಇಲಾಖೆ, ಬೆಂಗಳೂರು |
| ವಿಳಾಸ | ಬೆಂಗಳೂರು |
| ಸತ್ಯ ಪ್ರತಿಜ್ಞೆ ಮಾಡಿದ ದಿನಾಂಕಃ | 18.10.2025 |

**ಮುಖ್ಯ ವಿಚಾರಣೆ ಎ ಪಿ ಪಿ ರವರಿಂದಃ-**

ನಾನು ಏಪ್ರಿಲ್ 2006 ರಿಂದ ಮಾರ್ಚ್ 2008 ರವರೆಗೂ ಉಪನಿರ್ದೇಶಕರು, ಗಣಿ ಮತ್ತು ಭೂ ವಿಜ್ಞಾನ ಇಲಾಖೆಯಲ್ಲಿ ನನ್ನ ಕರ್ತವ್ಯವನ್ನು ನಿರ್ವಹಿಸಿರುತ್ತೇನೆ.

ಕನಕಪುರದಲ್ಲಿ ಗ್ರಾನೈಟ್ ಕಲ್ಲುಗಳ ಸಂಬಂಧ ನಮ್ಮ ಇಲಾಖೆ ಹಾಗೂ ಕಂದಾಯ, ಅರಣ್ಯ ಇಲಾಖೆಯವರು ಜಂಟಿ ಮೋಜಣಿಯ ಮೂಲಕ ಹಾಗೂ ನಮ್ಮ ಇಲಾಖೆಯ ಭೂ ವಿಜ್ಞಾನಿಗಳು ಮತ್ತು ಅಭಿಯಂತರರು ಸದರಿ ಜಂಟಿ ಮೋಜಣಿಯ ಕಾರ್ಯದಲ್ಲಿ ಭಾಗವಹಿಸಿದ್ದು ಅದರಂತೆ ವಲಯ ಕನಕಪುರದ ವಲಯ ಅರಣ್ಯಾಧಿಕಾರಿಗಳು ದಿನಾಂಕ 18.11.2006 ರಂದು ನಮ್ಮ ಕಚೇರಿಗೆ ಒಂದು ಪತ್ರ ಬರೆದಿರುತ್ತಾರೆ. ಸದರಿ ಪತ್ರದಲ್ಲಿ ಕನಕಪುರ ಅರಣ್ಯ ವಲಯದ ವ್ಯಾಪ್ತಿಯಲ್ಲಿ ಅಕ್ರಮವಾಗಿ ಅಲಂಕಾರಿಕ ಗ್ರಾನೈಟ್ ಕಲ್ಲುಗಳನ್ನು ಅರಣ್ಯ ವಾ್ಯಪ್ತಿಯನ್ನು ಅತಿಕ್ರಮ ಮಾಡಿ ಗಣಿಗಾರಿಕೆ ಸಾಗಣಿಕೆ

ಹಾಗೂ ದಾಸ್ತಾನು ಮಾಡಿದ ವಿವರಗಳ ಪಟ್ಟಿಯನ್ನು ನಮಗೆ ನೀಡಿದ್ದು ಈ ಸಂಬಂಧ ಖನಿಜ ಮೌಲ್ಯವನ್ನು ತಿಳಿಸುವಂತೆ ನಮ್ಮನ್ನು ಕೋರಿರುತ್ತಾರೆ. ಅದರಂತೆ ನಾನು ದಿಃ18.11.2006 ರಂದು ಸದರಿ ಪತ್ರಕ್ಕೆ ಪರೀಶೀಲನೆ ಮಾಡಿ ನನ್ನ ವರದಿಯಲ್ಲಿ ಭೂ ವಿಜ್ಞಾನ ತಾಂತ್ರಿಕ ವರದಿಯ ಮೇಲೆ ಕ್ರಮ ಸಂಖ್ಯೆ 19 ರ ಪ್ರಕಾರ ಕಚೇರಿಯಿಂದ ಪರವಾನಿಗೆ ಪಡೆದ 346.020 ಕ್ಯೂಬಿಕ್ ಮೀಟರ್ ಗಳಿಗೆ ಖನಿಜ ಮೌಲ್ಯ 10 ಲಕ್ಷದ 38 ಸಾವಿರದ 60 ರೂಗಳು ಹಾಗೂ ಅರಣ್ಯ ಇಲಾಖೆಯವರು ವಶಪಡಿಸಿಕೊಂಡಿರಮ 10 ದಿಂಬಿಗಳಿಗೆ 83.613 ಕ್ಯೂಬಿಕ್ ಮೀಟರ್ ಖನಿಜ ಮೌಲ್ಯ 2 ಲಕ್ಷದ 50 ಸಾವಿರ ಹಾಗೂ ಚಿಲ್ಲರೆಯಷ್ಟು ಖನಿಜ ಮೌಲ್ಯವನ್ನು ಕರ್ನಾಟಕ ಉಪಖನಿಜ ನಿಯಮಾವಳಿಯ 94 ರ ಅನುಸಾರ clasification as per form No.O ರಂತೆ ಖನಿಜ ಮೌಲ್ಯವನ್ನು ನಿರ್ಧರಿಸಿ ಸದರಿ ದಿನ ನನ್ನ ವರದಿಯನ್ನು ವಲಯ ಅರಣ್ಯಾಧಿಕಾರಿ ಕನಕಪುರ ವಲಯ ಕನಕಪುರ ರವರಿಗೆ ಸಲ್ಲಿಸಿಲಾಗಿರುತ್ತದೆ.

ಸಾಕ್ಷಿಗೆ ವಲಯ ಅರಣ್ಯಾಧಿಕಾರಿಯವರಿಗೆ ದಿನಾಂಕ 18.11.2006 ರಂದು ತಮ್ಮ ಕಚೇರಿಯಿಂದ ನೀಡಲಾದ ಪತ್ರದ ಸಮೇತ ವರದಿಯ ದೃಢೀಕೃತ ದಾಖಲೆಯನ್ನು ತೋರಿಸಲಾಗಿ ಸಾಕ್ಷಿಯು ನೋಡಿ ಗುರುತಿಸಿದ್ದು ಅದನ್ನು ಈಗ ನಿಪಿ-7 ಮತ್ತು 8 ಎಂದು ಕ್ರಮವಾಗಿ ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದ**

ನಾನು ನನ್ನ ವರದಿಯ ವ್ಯಾಪ್ತಿಯನ್ನು ಹೊರತು ಪಡಿಸಿ ಪ್ರಕರಣದ ಬಗ್ಗೆ ಮತ್ತೆ ಯಾವುದೇ ಮಾಹಿತಿಯನ್ನು ಪಡೆದುಕೊಂಡಿಲ್ಲ. ಸದರಿ ಅಮಾನತು ಪಡಿಸಿಕೊಂಡ ಕಲ್ಲುಗಳನ್ನು ನಾನು ಖುದ್ದಾಗಿ ನೋಡಿಲ್ಲ ಎಂದರೆ ಸಾಕ್ಷಿಯು ನಾನು ಜಂಟಿ ಮೋಜಣಿಯಲ್ಲಿ ಭಾಗವಹಿಸಿಲ್ಲ ಆದ್ದರಿಂದ ನೋಡಿಲ್ಲ ಎಂದು ನುಡಿಯುತ್ತಾರೆ. ನಾನು ಖುದ್ದಾಗಿ ಅದು ಯಾವ ಜಾತಿಯ ಕಲ್ಲು ಎಂದು ನೋಡದೇ ಇರುವ ಕಾರಣ ನಾನು ಸಲ್ಲಿಸಿರುವ ನಿಪಿ-8 ಕ್ಕೆ ಯಾವುದೇ ಆಧಾರ ಇಲ್ಲ ಅದು ಸರಿಯಿಲ್ಲ ಎಂದರೆ ಸುಳ್ಳು. ನಮಗೆ

ಸಲ್ಲಿಸಿದ ಮನವಿಯ ದಾಖಲೆಯನ್ನು ನಾನು ನ್ಯಾಯಾಲಯಕ್ಕೆ ಸಲ್ಲಿಸಿಲ್ಲ ಎಂದರೆ ಅದು ತನಿಖಾಧಿಕಾರಿಗೆ ಸಂಬಂಧಿಸಿದ್ದು ಎಂದು ನುಡಿಯುತ್ತಾರೆ. ಅದೇ ರೀತಿ ಕಲ್ಲಿನ ಮೌಲ್ಯವನ್ನು ತೋರಿಸುವ ವರದಿಯನ್ನು ಸಹ ಸಲ್ಲಿಸಿಲ್ಲ ಎಂದರೆ ಸರಿಯಲ್ಲ. ಆರೋಪಿಯೇ ಸದರಿ ಸ್ಥಳದಲ್ಲಿ ಅಕ್ರಮ ಗಣಿಗಾರಿಕೆ ಮಾಡುತ್ತಿದ್ದರು ಎಂಬುದರ ಬಗ್ಗೆ ನನಗೆ ಖುದ್ದಾಗಿ ಮಾಹಿತಿ ಇಲ್ಲ ಎಂದರೆ ಅದು ಸಂಬಂಧಪಟ್ಟ ಇಲಾಖೆಯವರಿಗೆ ತಿಳಿದಿರುತ್ತದೆ . ಸಾಕ್ಷಿಯು ಮುಂದುವರಿದು ಜಂಟಿ ಯೋಜಣೆಯಲ್ಲಿದ್ದವರು ಈ ಬಗ್ಗೆ ಮಾಹಿತಿ ಪಡೆದುಕೊಂಡಿರುತ್ತಾರೆಂದು ನುಡಿಯುತ್ತಾರೆ. ಕೇವಲ ಮೇಲಾಧಿಕಾರಿಗಳ ಮಾತನ್ನು ಕೇಳಿ ಸುಳ್ಳು ವರದಿಯನ್ನು ನೀಡಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಮರುವಿಚಾರಣೆಃ ಇರುವುದಿಲ್ಲ**

**ಓ ಹೇ ಕೇ ಸರಿ ಇದೆ**

**ಅಧಿಕ ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ.,**

**ಕನಕಪುರ .**